2001-2002

1. ಜಾಮಿಯಾ ಮಸೀದಿ ಮತ್ತು ಮದ್ರಸಾ ಬಂಡಿಗನಳ್ಳ, ನಾಗಮಂಗಲ - ರೂ.25,000
2. ಖಬ್ರಸ್ತಾನ್, ಒಳಪೇರೆಪುರ, ನಾಗಮಂಗಲ ತಾಲ್ಲೂಕು- ರೂ.25,000
3. ಮದೀನಾ ಮಸೀದಿ, ನಾಗಮಂಗಲ ತಾಲ್ಲೂಕು- ರೂ. 40,000

ಆ. ಇಲ್ಲ

ಇ. ಉದ್ಭವಿಸುವುದಿಲ್ಲ

ನಾಗಮಂಗಲ ತಾಲ್ಲೂಕಿನಲ್ಲಿ ಖಾಲಿ ಇರುವ ಪಶುವೈದ್ಯರ ನೇಮಕಾತಿ

375(508) ಶ್ರೀ ಚಲುವರಾಯ ಸ್ವಾಮಿ ಎನ್.(ನಾಗಮಂಗಲ): ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ನಾಗಮಂಗಲ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಹರದನಹಳ್ಳಿ ಗ್ರಾಮದಲ್ಲಿರುವ ಪಶು ಸಂಗೋಪನಾ ಆಸ್ಪತ್ರೆಯಲ್ಲಿ ಖಾಲಿ ಇರುವ ವೈದ್ಯರ ಹುದ್ದೆಯನ್ನು ಭರ್ತಿ ಮಾಡಲು ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ. ಪಶುವೈದ್ಯರನ್ನು ನೇಮಕಾತಿ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಕೊರಟಗೆರೆ ತಾಲ್ಲೂಕಿನಲ್ಲಿ ಮಸೀದಿಗಳಿಗೆ ವಕ್ಫ್ ಮಂಡಳಿಯಿಂದ ಅನುದಾನ

376(467) ಶ್ರೀ ಚಿನ್ನಿಗಪ್ಪ.ಸಿ (ಕೊರಟಗೆರೆ): ಮಾನ್ಯ ಅಲ್ಪಸಂಖ್ಯಾಂತರ ಕಲ್ಯಾಣ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನ ಮುಸ್ಲಿಂ ಬಾಂಧವರ ಮಸೀದಿಗಳ ಸಂಖ್ಯೆ ಎಷ್ಟು?

ಆ. ಈ ಮಸೀದಿಗಳ ಜೀರ್ಣೋದ್ಧಾರದ ಕಟ್ಟಡ ಹಾಗೂ ಕಾಂಪೌಂಡ್ ಗೋಡೆ ನಿರ್ಮಿಸಲು ವಕ್ಫ್ ಮಂಡಳಿಯ ವತಿಯಿಂದ ಇದುವರೆವಿಗೂ ಬಿಡುಗಡೆಯಾದ ಮೊತ್ತವೆಷ್ಟು?

ಇ. ವಕ್ಫ ಮಂಡಳಿಯ ವತಿಯಿಂದ ಬಿಡುಗಡೆ ಯಾದ ಮೊತ್ತದಲ್ಲಿ ಯಾವ ಯಾವ ಮಸೀದಿಗಳನ್ನು ದುರಸ್ತೆಗೊಳಿಸಲಾಗಿದೆ; ಇದಕ್ಕೆ ತಗಲಿರುವ ಅಂದಾಜು ವೆಚ್ಚ ಎಷ್ಟು? ವಿವರ ನೀಡುವುದು?

ಈ. ಇನ್ನೂ ದುರಸ್ತಿಗೊಳ್ಳದೇ ಬಾಕಿ ಉಳಿದಿರುವ ಮಸೀದಿ ಹಾಗೂ ಜಮ್ಮಾಮಸೀದಿಗಳ ಸಂಖ್ಯೆ ಎಷ್ಟು; ವಿವರ ಒದಿಗಿಸುವುದು

ಉ. ದುರಸ್ತಿಗೊಳ್ಳದೇ ಬಾಕಿ ಉಳಿದಿರುವ ಮಸೀದಿಗಳ ಜೀರ್ಣೋದ್ಧಾರ ಕಾರ್ಯಕ್ಕೆ ವಕ್ಫ್ ಮಂಡಳಿಯಿಂದ ಹಣ ಬಿಡುಗಡೆ ಮಾಡಿ ದುರಸ್ತಿಗೊಳಿಸಿ ಈ ಭಾಗದ ಮುಸ್ಲಿಂ ಬಾಂಧವರಿಗೆ ಪ್ರಾರ್ಥನೆ ಹಾಗೂ ಇತರೆ ಕಾರ್ಯಗಳಿಗೆ ಅನುಕೂಲ ಮಾಡಿಕೊಡುವುದು ಯಾವಾಗ;

ಊ. ಕೊರಟಗೆರೆ ಕ್ಷೇತ್ರದ ಎಷ್ಟು ಖಬರಸ್ತಾನ್‌ಗಳಿಗೆ ವಕ್ಫ್ ಮಂಡಳಿಯಿಂದ ಅನುದಾನ ಬಿಡುಗಡೆ ಮಾಡಲಾಗಿದೆ; ಈಗಾಗಲೇ ದುರಸ್ತಿಗೊಂಡ ಖಬರಸ್ತಾನಗಳ ಸಂಖ್ಯೆ ಎಷ್ಟು? (ವಿವರ ಒದಗಿಸುವುದು)

ಶ್ರೀ ಎಂ.ಎಲ್. ಉಸ್ತಾದ್(ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ರಾಜ್ಯ ಸಚಿವರು)

ಅ. ಕೊರಟಗೆರೆ ತಾಲ್ಲೂಕಿನಲ್ಲಿ 11 ಮಸೀದಿಗಳಿವೆ.

ಆ. ಸರ್ಕಾರವು ಕಳೆದ 3 ವರ್ಷಗಳಲ್ಲಿ ಅಂದರೆ 1999-2000, 2000-2001 ಹಾಗೂ 2001-2002ರಲ್ಲಿ 6 ವಕ್ಫ್ ಸಂಸ್ಥೆಗಳಿಗೆ ರೂ. 1,45,000-00ಗಳನ್ನು ಮಂಜೂರು ಮಾಡಿದ್ದು, ಈ ಪೈಕಿ ವಕ್ಫ್ ಮಂಡಳಿಯು ಎಲ್ಲಾ ಹಣವನ್ನು ಬಿಡುಗಡೆ ಮಾಡಿದೆ.

ಇ. ಕಳೆದ 3 ವರ್ಷಗಳಲ್ಲಿ ಸರ್ಕಾರವು 6 ಮಸೀದಿಗಳಿಗೆ ಇವುಗಳ ನಿರ್ಮಾಣ ಹಾಗೂ ಜೀರ್ಣೋದ್ಧಾರಕ್ಕಾಗಿ ರೂ. 1,45,000-00ಗಳ ಅನುದಾನವನ್ನು ಮಂಜೂರು ಮಾಡಿದೆ.

ಈ. ಇಲ್ಲ

ಉ. ಸಂಬಂಧಪಟ್ಟ ವಕ್ಫ್ ಸಂಸ್ಥೆಗಳಿಂದ ಪ್ರಸ್ತಾವನೆ ಬಂದಲ್ಲಿ, ಅವುಗಳನ್ನು ಹಣದ ಲಭ್ಯತೆ ಅನುಸಾರ ಪರಿಶೀಲಿಸಿ ಅನುದಾನವನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದು.

ಊ. ಕಳೆದ 3 ವರ್ಷಗಳಲ್ಲಿ 2 ಖಬ್ರಸ್ತಾನಗಳಿಗೆ ರೂ.50,000ಗಳನ್ನು ತಂತಿ ಬೇಲಿ: ಕಾಂಪೌಂಡ್ ಗೋಡೆ ಹಾಕಲು ಸರ್ಕಾರದಿಂದ ಮಂಜೂರಾದ ಹಣವನ್ನು ಬಿಡುಗಡೆ ಮಾಡಲಾಗಿದೆ.

ಕೊರಟಗೆರೆ ವ್ಯಾಪ್ತಿಯ ಮಸೀದಿ, ರುದ್ರಭೂಮಿ ಹಾಗೂ ಶಾದಿಮಹಲ್‌ಗಳ ಕಾಮಗಾರಿಗಳು

377(673) ಶ್ರೀ ಚನ್ನಿಗಪ್ಪ.ಸಿ (ಕೊರಟಗೆರೆ): ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಕೊರಟಗೆರೆ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಮಸೀದಿಗಳ, ರುದ್ರಭೂಮಿಗಳ ಹಾಗೂ ಶಾಧಿಮಹಲ್‌ಗಳ ಸಂಖ್ಯೆ ಎಷ್ಟು?

2. ಕಳೆದ ಮೂರು ವರ್ಷಗಳಿಂದ ಮಸೀದಿ ರುದ್ರಭೂಮಿ ಹಾಗೂ ಶಾದಿಮಹಲ್‌ಗಳ ಜೀರ್ಣೋದ್ಧಾರ ಕಾರ್ಯಕ್ಕೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ. (ವಿವರ ಒದಗಿಸುವುದು)

3. ಮುಸ್ಲಿಂ ಬಾಂಧವರ ಮಸೀದಿಯ ಹೊಸ ಕಟ್ಟಡಕ್ಕೆ ಕಾಂಪೌಂಡ್ ಗೋಡೆಯ ನಿರ್ಮಾಣಕ್ಕೆ ಸಕಾಲದಲ್ಲಿ ಅನುದಾನ ಮಂಜೂರು ಆಗದೇ ಅರ್ಧದಲ್ಲಿಯೇ ಕಾಮಗಾರಿಗಳು ನಿಂತಿರುವ ಕಟ್ಟಡಗಳ ಸಂಖ್ಯೆ ಎಷ್ಟು?

4. ಇವುಗಳಿಗೆ ಸಕಾಲದಲ್ಲಿ ಅನುದಾನವನ್ನು ಪೂರೈಸಿ ಈ ಭಾಗದ ಬಡಿ ಮುಸ್ಲಿಂ ಬಾಂಧವರಿಗೆ ಅನುಕೂಲ ಮಾಡಿಕೊಡುವುದು ಯಾವಾಗ?

ಶ್ರೀ ಎಂ. ಎಲ್. ಉಸ್ತಾದ್ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

1. ಕೊರಟಗೆರೆ ತಾಲ್ಲೂಕಿನಲ್ಲಿ 11 ಮಸೀದಿಗಳು ಹಾಗೂ 11 ರುದ್ರಭೂಮಿ (ಖಬ್ರಸಾನ) ಗಳಿಗೆ ಆದರೆ ಯಾವುದೇ ವಕ್ಫ್ ಸಂಸ್ಥೆ ಆಡಿಯಲ್ಲಿ ಶಾದಿಮಹಲ್‌ಗಳು ಇರುವುದಿಲ್ಲ.

2. ಕಳೆದ 3 ವರ್ಷಗಳಿಂದ ಅನುದಾನ ಬಿಡುಗಡೆ ಮಾಡಿದ ವಿವರ ಈ ಕೆಳಕಂಡಂತಿದೆ.

1999-2000

1. ಮಸೀದಿ ಮೊಹಮ್ಮದೀಯ ಹಿದಾದ ಮುಸ್ಲಿಂ, ಕುಂಟಿಬಿಲಕುಹಳ್ಳಿ: ರೂ.20,000-00